# ಎಡಿನ್‌ಬರ್ಗ್ ವಸ್ತುಪ್ರದರ್ಶನ

## ■ ಯುವಜನರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಆಸಕ್ತಿ ಬೆಳೆಸಲು ಯತ್ನ





ಎಡಿನ್‌ಬರ್ಗ್ ವಿಜ್ಞಾನ ಮೇಳದಲ್ಲಿ ನಿಜವಾದ ಶಸ್ತ್ರಚಿಕಿತ್ಸಾ ಉಪಕರಣಗಳೊಂದಿಗೆ ಅಣಕು ಶಸ್ತ್ರಚಿಕಿತ್ಸೆ ಮಾಡುತ್ತಿರುವ ವಿದ್ಯಾರ್ಥಿಗಳು. ವಿಜ್ಞಾನ ಪ್ರಯೋಗಗಳ ಬಗ್ಗೆ ಮಾಹಿತಿ ಪಡೆಯುತ್ತಿರುವ ಮಕ್ಕಳು (ಎಡ ಚಿತ್ರ).

- ಸೆ.8ರವರೆಗೆ ನಡೆಯಲಿರುವ ಮೇಳ
- ನಡೆಯಲಿವೆ 15 ಚರ್ಚಾ ಕಾರ್ಯಾಗಾರಗಳು
- ತುಂಬಿ ತುಳುಕುತ್ತಿದೆ ಭಾರ್ತಿಯ ಸಿಟಿ ಆವರಣ

**ಬೆಂಗಳೂರು:** ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಿರುವ 10 ದಿನಗಳ ಎಡಿನ್‌ಬರ್ಗ್ ಅಂತಾರಾಷ್ಟ್ರೀಯ ವಿಜ್ಞಾನ ಮೇಳಕ್ಕೆ ಕೃಷಿ ಸಚಿವ ಕೃಷ್ಣಬೈರೇಗೌಡ ಶುಕ್ರವಾರ ಚಾಲನೆ ನೀಡಿದರು. ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ 26ನೇ ಎಡಿನ್‌ಬರ್ಗ್ ಮೇಳ ಹೆಬ್ಬಾಳ ಸಮೀಪದ ಭಾರ್ತಿಯ ಸಿಟಿ ಆವರಣದಲ್ಲಿ ಸೆ. 8ರವರೆಗೆ ನಡೆಯಲಿದೆ.

ಮೇಳ ಉದ್ಘಾಟಿಸಿ ಮಾತನಾಡಿದ ಕೃಷ್ಣಬೈರೇಗೌಡ, ಮೂಲ ವಿಜ್ಞಾನ ಹಾಗೂ ಸಂಶೋಧನೆಗಳ ಬಗ್ಗೆ ಭಾರತೀಯರು ನಿರ್ಲಕ್ಷ್ಯ ತೋರುತ್ತಿದ್ದಾರೆ. ಪಾಲಕರು ವೈಜ್ಞಾನಿಕ ಅಭಿವೃದ್ಧಿಯ ಮಹತ್ವವನ್ನು ಅರಿತು ಮಕ್ಕಳಿಗೆ ಈ ಕ್ಷೇತ್ರದಲ್ಲಿ ಆಸಕ್ತಿ ತುಂಬಬೇಕು ಎಂದರು.

ಎಡಿನ್‌ಬರ್ಗ್ ಮೇಳ ಇದೇ ಮೊದಲ ಬಾರಿಗೆ ಭಾರತದಲ್ಲಿ ನಡೆಯುತ್ತಿದೆ. ವಿದ್ಯಾರ್ಥಿಗಳು, ಶಿಕ್ಷಕರೂ ಸೇರಿ 50 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದು, ಮೊದಲ ದಿನವೇ ಭಾರ್ತಿಯ ಸಿಟಿ ಆವರಣ ತುಂಬಿ ತುಳುಕುತ್ತಿತ್ತು. ವಿದ್ಯಾರ್ಥಿಗಳಿಗೆ ಶಸ್ತ್ರಚಿಕಿತ್ಸಾ ಪ್ರಕಾರದಲ್ಲಿ ಪ್ರಾಯೋಗಿಕ ಅನುಭವ ಒದಗಿಸುವ ಹಲವು ಕಾರ್ಯಕ್ರಮಗಳನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳೇ ವೈದ್ಯರಾಗಿ ನಿಜವಾದ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಉಪಯೋಗಿಸಿಕೊಂಡು ತೀವ್ರ ಕಾಲು ಗಾಯ, ಕೀ ಹೋಲ್ ಶಸ್ತ್ರಚಿಕಿತ್ಸೆಗಳನ್ನು ಮಾಡುವುದು, ಗಡ್ಡೆ ತೆಗೆಯುವ ಕಿರು ಶಸ್ತ್ರಚಿಕಿತ್ಸೆ, ರಕ್ತದ ಮಾದರಿ ಪಡೆಯುವುದು ಸೇರಿ ಹಲವು ರೀತಿಯ ಚಟುವಟಿಕೆಗಳನ್ನು ನಡೆಸಿ ಪ್ರಾಯೋಗಿಕ ಅನುಭವ ಪಡೆದುಕೊಂಡರು.

ಮೇಳದಲ್ಲಿ 15 ಚರ್ಚಾ ಕಾರ್ಯಾಗಾರಗಳು, ಆರೋಗ್ಯ, ಸೌರವಿದ್ಯುತ್, ತಂತ್ರಜ್ಞಾನ, ಖಗೋಳಶಾಸ್ತ್ರ, ಗಣಿತ ಹಾಗೂ ಇತರ ಕ್ಷೇತ್ರಗಳ ಬಗ್ಗೆ ನಾನಾ ವಯೋಮಾನದ ಜನರಿಗೆ ಪ್ರತ್ಯೇಕ ಕಾರ್ಯಕ್ರಮಗಳು ನಡೆಯಲಿವೆ. ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10ರಿಂದ 2 ಗಂಟೆಯವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 8ರವರೆಗೆ, ಶನಿವಾರ ಹಾಗೂ ಭಾನುವಾರ ಬೆಳಗ್ಗೆ 11ರಿಂದ ಸಂಜೆ 7 ಗಂಟೆಯವರೆಗೆ ಪ್ರವೇಶ ಇರಲಿದೆ. ಆಸಕ್ತರು ವಿವರಗಳಿಗೆ ಹಾಗೂ ಟಿಕೆಟ್‌ಗಳಿಗಾಗಿ www.sciencefestival.in ಸಂಪರ್ಕಿಸಬಹುದು

ಭಾರ್ತಿಯ ಸಿಟಿ ಸಮೂಹದ ಅಧ್ಯಕ್ಷ ಸ್ನೇಹದೀಪ್ ಆಗರವಾಲ್, ಭಾರತದಲ್ಲಿನ ಬ್ರಿಟನ್ ಉಪ ಹೈ ಕಮಿಷನರ್ ಇಯಾನ್ ಫೆಲ್ಬನ್, ಇಐಎಸ್‌ಎಫ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಡಾ. ಸೈಮನ್ ಗೇಜ್ ಉಪಸ್ಥಿತರಿದ್ದರು.



ಹೆಬ್ಬಾಳ ಸಮೀಪದ ಭಾರ್ತಿಯ ಸಿಟಿ ಆವರಣದಲ್ಲಿ ಶುಕ್ರವಾರ ಆರಂಭವಾದ ಎಡಿನ್‌ಬರ್ಗ್ ವಿಜ್ಞಾನ ಮೇಳದಲ್ಲಿ ಪವನ ವಿದ್ಯುತ್ ಬಗೆಗಿನ ಪ್ರಾತ್ಯಕ್ಷಿಕೆಯನ್ನು ಕುತೂಹಲದಿಂದ ವೀಕ್ಷಿಸುತ್ತಿರುವ ವಿದ್ಯಾರ್ಥಿ.